ತಾಯ್ತನವನ್ನು ಕೆ.ಎಸ್.ನ. ಎಂದಿಗೂ ಎತ್ತಿ ಹಿಡಿದವರು. ಆ ವಸುಂಧರೆಯ ಮಗ ನಾನು ಎಂದು ಅಪಾರ ಮಾತೃಪ್ರೀತಿಯಿಂದ, ಸ್ತ್ರೀಶಕ್ತಿಯನ್ನು ಕುರಿತ ನಂಬಿಕೆಯಿಂದ ನೆಚ್ಚಿದವರು. ಶಿವಪ್ರಕಾಶರ 'ಸಮಗಾರ ಭೀಮವ್ವ' ಇದರ ಇನ್ನೂ ಶಕ್ತವಾದ ಆವೃತ್ತಿಯಂತೆ ಕಾಣಿಸುತ್ತದೆ.

ಸಮಗಾರ ಭೀಮವ್ವ ಎದೆ ಹಾಲ ನೀಡವ್ವ
ನೆಲದೆದೆಯ ಹಾಲು ಹೀರಿ ನೆತ್ತಿಗೇರಿದ ಬಿಸಿಲು
.....
ನೆಲದ ಕಸವನು ಗುಡಿಸಿ ಕಸವ ಗೊಬ್ಬರ ಮಾಡಿ
ಬೀಜಬಿತ್ತುವ ಕೈಯೆ
ದೇಸಾಯಿ ಪಾಟೀಲ ಕುಲಕರಣಿಗಳ ಕಾವು
ಕಡಿಯಲಾಗದ ಮರವೆ, ಕಡಿದರೂ ಹೊಲೆ
ಹೊಲೆಯೆಂಬ ಒಲೆಯಲ್ಲಿ ಸುಟ್ಟರೂ
ರೊಟ್ಟಿಯಾಗುವ ಬಾಯ್ಗೆ.
ಮೊಲೆ ಬಾರದ ಕೊಡಗೂಸೇ
ಮದುವೆಯಾಗದ ತಾಯಿ
ಮೊಲೆಹಾಲು ಬೇಡವ್ವ ಎದೆಹಾಲ ನೀಡವ್ವ
(ಸಮಗಾರ ಭೀಮವ್ವ – 'ಮಳೆ ಬಿದ್ದ ನೆಲದಲ್ಲಿ' ಸಂಕಲನ)

ಈ ಸಾಲುಗಳು ಶಿವಪ್ರಕಾಶರ ಇನ್ನೊಂದು ಜೀವೋತ್ಕಟ ಬಯಕೆಯನ್ನು ಧ್ವನಿಸುತ್ತಿರುವಂತೆ ಕಾಣಿಸುತ್ತವೆ. ತಾಯಮೃತದೊಲವನ್ನು ಪಡೆಯುವುದು ಎಂದರೆ, ತಾನು ಬದುಕುವುದು, ನಾಗರಿಕತೆ ತನಗೆ ತಾನೇ ಹಾಕಿಕೊಂಡಿರುವ ಶಾಪಗಳಿಂದ ಪಾರಾಗುವುದು, ಇದೆಲ್ಲ ಹೌದು. ಆದರೆ, ತಾಯ್ತನಕ್ಕಿರುವ ಸ್ಪರ್ಶಮಣಿಯ ಗುಣದಿಂದ ಗಂಡಿನಲ್ಲೂ ಉಕ್ಕಬಹುದಾದ ತಾಯ್ತನವನ್ನೂ ಇದು ಬೇಡುತ್ತಿದೆ. ತನ್ನ ಸ್ಪರ್ಶಕ್ಕೆ ಬಂದವರಲ್ಲೂ ತಾಯಿ ತಾಯ್ತನದ ಗುಣಗಳನ್ನು ನೀಡಬಲ್ಲಳು, ಪಡೆಯುವ ಯೋಗ್ಯತೆಯೊಂದು ಬೇಕಲ್ಲ, ಅದು ಯೋಗ್ಯತೆಯ ಪ್ರಶ್ನೆ ಹೌದೋ ಅಲ್ಲವೋ ಆದರೆ ಖಂಡಿತ ಅದು ಮನಃಸ್ಥಿತಿಯ ಪ್ರಶ್ನೆ. ತಾಯ ಅಂತಃಕರಣಕ್ಕೆ ಎಲ್ಲ ಶಾಪಗಳಿಂದ ಉಶ್ಶಾಪ ಕೊಡಿಸಬಲ್ಲ ಅಸಾಧಾರಣ ಶಕ್ತಿಯಿದೆ. ಮನುಷ್ಯನನ್ನೂ, ಬದುಕನ್ನೂ, ಪ್ರಕೃತಿಯನ್ನೂ ಯಾಕೆ ಹೀಗೆ ಬಿಡಿ ಬಿಡಿ ಮಾಡಿ ಹೇಳುವುದು, ಲೋಕ ಸಮಸ್ತವನ್ನೂ ಪೊರೆಯಬಲ್ಲ ತಾಯ ಶಕ್ತಿಯನ್ನು ಅರ್ಥ ಮಾಡಿಕೊಳ್ಳುವುದೇ ಅರ್ಧ ಕಾಯಿಲೆ ವಾಸಿಯಾದಂತೆ ಎನ್ನುವ ಭಾವ ಇವರ ಕಾವ್ಯದಲ್ಲಿ ಪುನರಾವರ್ತನೆಯಾಗುತ್ತದೆ. ತಾಯಿಗೆ ಶರಣಾಗುವುದೆಂದರೆ ಅದು ಬದುಕುವ ದಾರಿಯನ್ನು ಹಿಡಿದಂತೆ.

ಶಿವಪ್ರಕಾಶರ ಕಾವ್ಯ ಪ್ರಯೋಗಗಳು, ಭಾಷೆಯನ್ನು ಮುರಿದು ಕಟ್ಟುವ, ಕಟ್ಟುತ್ತಾ ಮುರಿಯುವ, ಈ ತನಕದ ಅರ್ಥಪರಂಪರೆಗಳನ್ನು ಪಕ್ಕಕ್ಕೆ ಸರಿಸಿ, ಹೊಸದನ್ನೇ ಕಟ್ಟುವ ಮೂಲಕ ಇವರು ಕನ್ನಡ ಭಾಷೆಯ ಕಸುವು, ಚೆಲುವು ಮತ್ತು ಸಾಧ್ಯತೆ ಎಲ್ಲವನ್ನೂ ವಿಸ್ತರಿಸಿದ್ದಾರೆ. ಕನ್ನಡ ಕಾವ್ಯದ ಶಿಖರವೆಂದು ಇವರನ್ನು ಗೌರವಿಸುವ ಹೆಮ್ಮೆಯನ್ನು ನಮಗೆ ಕೊಟ್ಟಿದ್ದಾರೆ.

ಇಂಥ ಕೃತಿಯನ್ನು ಚೆಲುವಾಗಿ ರೂಪಿಸಿರುವ ಬೆಸಗರಹಳ್ಳಿ ರಾಮಣ್ಣ ಟ್ರಸ್ಟ್‌ಗೆ ಇದೊಂದು ಗರಿ.